(iii) ದಕ್ಷಿಣ ಕನ್ನಡ ಜಿಲ್ಲೆಯ ಹೆಂಚು ಕಾರ್ಮಿಕರಿಗೆ ತುಟ್ಟಿಭತ್ಯೆ ಸಹಿತ ಕನಿಷ್ಟ ವೇತನ ನೀಡುವುದು

ಶ್ರೀ ಬಿ. ಎಂ. ಇದಿನಬ್ಬ — ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡದ ಹೆಂಚು ಕಾರ್ಮಿಕರ ತುಟ್ಟಿಭತ್ಯೆ ಸಹಿತ ಕನಿಷ್ಟ ವೇತನದ ಬಗ್ಗೆ ಆಗಾಗ ತಿಳಿಸಲಾಗಿದೆ. ಆದರೆ ತುಟ್ಟಿಭತ್ಯೆ ಸಹಿತ ಕನಿಷ್ಟ ವೇತನದ ಅಂತಿಮ ಪ್ರಕಟಣೆ ಇನ್ನೂ ಬಾರದೇ ಇರುವುದರಿಂದ ಹೆಂಚು ಕಾರ್ಮಿಕರು ಕಂಗಾಲಾಗಿರುತ್ತಾರೆ. ಆದಕಾರಣ ಹೆಂಚು ಕಾರ್ಮಿಕರ ತುಟ್ಟಿಭತ್ಯೆ ಸಹಿತ ಕನಿಷ್ಟ ವೇತನದ ಅಂತಿಮ ಪ್ರಕಟಣೆಯನ್ನು ಜರೂರಾಗಿ ಮಾಡಬೇಕಾಗಿರುತ್ತದೆ. ಈ ಕುರಿತು ಕಾರ್ಮಿಕ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೀರಣ್ಣ (ಸಾರಿಗೆ ಸಚಿವರು) — ಇದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ ಸ್ವಾಮಿ.

4) ಹೊಸದುರ್ಗ ಕ್ಷೇತ್ರದ ಮಂತ್ರೋಡಿ ಹೋಬಳಿಯ ಪರಿಸರದ ರಸ್ತೆಯನ್ನು ಡಾಂಬರ್ ಮಾಡುವುದು

ಶ್ರೀ ಜಿ.ರಾಮದಾಸ್(ಹೊಸದುರ್ಗ).—ಮಾನ್ಯ ಅಧ್ಯಕ್ಷರೇ, ಹೊಸದುರ್ಗ ಕ್ಷೇತ್ರದ ಮಂತ್ರೋಡಿ ಹೋಬಳಿಯಲ್ಲಿ ಸುಮಾರು ೬-೭ ಸಿಮೆಂಟ್ ಫ್ಯಾಕ್ಟ್ರಿಗಳು ಉತ್ಪಾದನಾ ಕಾರ್ಯದಲ್ಲಿ ನಡೆಯುತ್ತಾ ಇವೆ. ಇದರಿಂದ ಸುಮಾರು ದಿವಸಒಂದಕ್ಕೆ ಲಾರಿಗಟ್ಟಲೆ ಸೀಮೆಂಟ್ ಲೋಡುಗಳು ಹೊರಗಡೆ ಮಾರಾಟಕ್ಕೆ ಹೋಗುತ್ತವೆ. ಈ ಸಾಗಾಣಿಕೆಯು ಮಂತ್ರೋಡಿನಿಂದ, ಗುಡ್ಡದನೇರಲಕೆರೆ ಕಿಟದಾಳ ಮತ್ತು ಚಿಕ್ಕಬ್ಯಾಲದಕೆರೆಯ ಮೂಲಕ ಹಾದುಹೋಗಬೇಕಾಗಿರುತ್ತದೆ. ಆದರೆ ರಸ್ತೆಯು ಬಹಳ ಗುಂಡಿಗಳಿಂದ ಕೂಡಿದಾಗಿದ್ದು ಮಣ್ಣಿನ ರಸ್ತೆಯಾದ ಕಾರಣದಿಂದ ಲಾರಿಗಳೇ ಚಲಿಸುವಾಗ ಏಳ ಬಹುದಾದ ದೂಳು ನಭೋಮಂಡಲವನ್ನು ಮುಟ್ಟುತ್ತವೆ. ಎದುರಿಗೆ ಬರುವ ವಾಹನ ಮಂತ್ರಿ ಪಾದಚಾರಿಗಳು ಕಣ್ಣುಮುಚ್ಚಿಕೊಳ್ಳಬೇಕಾಗಿರುತ್ತದೆ. ಇದರಿಂದ ಆಜುಬಾಜಿನಲ್ಲಿರುವ ಹಳ್ಳಿಗಳ ಮನೆ ಮಠಗಳು ಧೂಳಿನಿಂದ ತುಂಬಿಹೋಗುವುದರಿಂದ ಸಾಂಕ್ರಾಮಿಕ ರೋಗಕ್ಕೆ ಕೇಂದ್ರವಾಗಬಹುದು. ಮೊದಲೇ ಬಡತನವನ್ನು ಹಾಸುಹೊದ್ದಿರುವ ಹಳ್ಳಿಗರಿಗಿರುವ ಒಂದೇ ಜೊತೆ ಬಟ್ಟೆಯು ಈ ಧೂಳಿನಿಂದ ಮಲಿನವಾದರೆ ಅವರು ಶುದ್ಧವಾಗಿರುವುದು ಹೇಗೆ ? ಆದ್ದರಿಂದ ಪಿಬಡ್ಲ್ಯುಡಿ ಸಚಿವರು ಪರಿಶೀಲಿಸಿ ಈ ರಸ್ತೆಯನ್ನು ಟಾರ್ ರಸ್ತೆಯನ್ನಾಗಿ ಮಾಡಿಕೊಡಲು ಮತ್ತು ಜತೆಗಿರುವ ತೊಂದರೆಯನ್ನು ದೂರ ಮಾಡಲು ಕೋರುತ್ತೇನೆ,

ಶ್ರೀ ವೀರಣ್ಣ (ಸಾರಿಗೆ ಸಚಿವರು).—ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಸೂಕ್ತ ಕ್ರಮ ತೆಗೆದು ಕೊಳ್ಳುವಂತೆ ಕೇಳುತ್ತೇನೆ.

ಶ್ರೀ ಜಿ. ರಾಮದಾಸ್.—ಅಧ್ಯಕ್ಷರೇ, ಅವರಿಂದ ಉತ್ತರ ಬಂದರೆ ಸಾಲದು. ಸಂಬಂಧಪಟ್ಟ ಲೋಕೋಪಯೋಗಿ ಸಚಿವರನ್ನೇ ಕರೆಯಿಸಿ ಉತ್ತರ ಕೊಡಿಸಿ ಸ್ವಾಮಿ.

ಅಧ್ಯಕ್ಷರು.—ಆಯಿತು, ತಾವು ಕುಳಿತುಕೊಳ್ಳಿ.

5) ರೈತ ಕಾರ್ಮಿಕರಿಗೆ ಸರ್ಕಾರಿ ಜಮೀನನ್ನು ಬಿಡುಗಡೆ ಮಾಡುವುದು

ಶ್ರೀ ಕೆ.ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ರೈತ ಕಾರ್ಮಿಕರ ಆದೇಶದ ಮೇರೆಗೆ ದಿನಾಂಕ ೨೩-೨-೧೯೮೭ರಂದು ರಾಜ್ಯದಾದ್ಯಂತ ಅನೇಕ ಜಿಲ್ಲೆಗಳಲ್ಲಿ ರೈತ ಕಾರ್ಮಿಕರು ಬಂಜರು ಜಮೀನನ್ನು ಹೂಳಿದರು. ಅದೇ ಪ್ರಕಾರ ಚಿತ್ರದುರ್ಗ ಜಿಲ್ಲೆ ಮಂತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಸರ್ಕಾರಿ ಜಮೀನನ್ನು ರೈತಕಾರ್ಮಿಕರು ೨ ಎಕರೆ ೩ ಎಕರೆ ಜಮೀನನ್ನು ವಶಪಡಿಸಿಕೊಳ್ಳಲು ಹೋದಾಗ ಅವರನ್ನು ದಸ್ತಗಿರಿ ಮಾಡಲಾಯಿತು. ಚಿತ್ರದುರ್ಗದಲ್ಲಿ ಸಂಜೆಯೊಳಗಾಗಿ ಅಂಥವರನ್ನು ಬಿಡುಗಡೆ ಮಾಡಿದರೆ ಯಾದಗಿರಿ ತಾಲ್ಲೂಕಿನ ಮುರಗೋಳ ಗ್ರಾಮದಲ್ಲಿ ಸುಮಾರು ಎರಡು ನೂರು ರೈತ ಕಾರ್ಮಿಕರು ಜಮೀನನ್ನು ವಶಪಡಿಸಿಕೊಳ್ಳಲು ಹೋದಾಗ ಅವರ ಪೈಕಿ ಸುಮಾರು ೭೪ ಜನರನ್ನು ದಸ್ತಗಿರಿ ಮಾಡಿದ್ದಾರೆ. ಅವರಲ್ಲಿ ೧೦ ಜನ ಹೆಂಗಸರು ದಿನಾಂಕ ೨೪-೨-೧೯೮೭ರಿಂದ ಇದುವರೆಗೂ ಗುಲ್ಬರ್ಗ

ಬಂದಿಖಾನೆಯಲ್ಲಿ ಇಟ್ಟಿದ್ದಾರೆ. ಹೊಟ್ಟೆಗೆ ಅನ್ನವಿಲ್ಲದೆ ಯಾವುದೇ ಪ್ರಕಾರ ಬದಂಕುವ ದಾರಿ ಕಾಣದಿದ್ದಾಗ ಈ ರೈತ ಕಾರ್ಮಿಕರು ಸುಮಾರು ೫೦೦ ಎಕರೆ ಜಮೀನನ್ನು ವಶಪಡಿಸಿಕೊಂಡಿದ್ದು ತಪ್ಪಲ್ಲ. ಕಾರಣ ಮಾನ್ಯ ಮಂತ್ರಿಗಳು ಈ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸಿ ಬಂದಿಖಾನೆಯಲ್ಲಿದ್ದ ರೈತಕಾರ್ಮಿಕರನ್ನು ಬೇಗನೆ ಬಿಡುಗಡೆ ಮಾಡುವಂತೆ ಹೇಳಬೇಕು ಮತ್ತು ಈ ಭಾಗದಲ್ಲಿದ್ದ ೨,೮೦೦ ಎಕರೆ ಜಮೀನಿನಲ್ಲಿ ಸುಮಾರು ೬೦೦ ಎಕರೆ ಜಮೀನನ್ನು ಈ ರೈತಕಾರ್ಮಿಕರ ಹೆಸರಿಗೆ ಪಟ್ಟಾ ಮಾಡುವ ವ್ಯವಸ್ಥೆ ಮಾಡಬೇಕಾಗಿ ವಿನಂತಿ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಇದು ಇಬ್ಬರು ಮಂತ್ರಿಗಳಿಗೆ ಸಂಬಂಧಿಸಿದ ವಿಷಯ ಇದೆ. ವಶಪಡಿಸಿಕೊಂಡಿರುವ ಜಮೀನನ್ನು ರೈತರಿಗೇ ಖಾಯಂ ಆಗಿ ಬಿಟ್ಟುಕೊಡಬೇಕೆಂದು ಕೇಳಿದ್ದಾರೆ. ಎರಡನೆಯದು ಕೆಲವು ರೈತಕಾರ್ಮಿಕರನ್ನು ಬಂಧಿಸಿದ್ದಾರೆಂದು ಹೇಳಿದ್ದಾರೆ. ಇದನ್ನು ವಿಚಾರಣೆ ನಡೆಸಿ ಏನು ಕ್ರಮ ತೆಗೆದುಕೊಳ್ಳಬೇಕೋ ಆವರನ್ನು ಬಿಡುಗಡೆ ಮಾಡಬೇಕಾದರೆ ಬಿಡುಗಡೆ ಮಾಡಿಸುತ್ತೇವೆ. ಇನ್ನು ಜಮೀನನ್ನು ಬಿಟ್ಟು ಕೊಡುವ ಬಗ್ಗೆ ರೆವಿನ್ಯೂ ಮಂತ್ರಿಗಳಿಗೆ ತಿಳಿಸುತ್ತೇನೆ.

೬) ಕಾಪು ಕ್ಷೇತ್ರದ ಎಲ್ಲೂರು ಗ್ರಾಮದ ಶೇಖರ ಶೆಟ್ಟಿಯವರು ಕಾರ್ಮಿನ್ ರೋಡ್ರಿಗ್ಸ್ ಅವರ ಮನೆಯ ಮೇಲೆ ಧಾಳಿ ನಡೆಸಿರುವುದು

ಶ್ರೀ ವಸಂತ ವಿ ಸಾಲ್ಲಿಯಾನ (ಕಾಪು).—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರವಾದ ಕಾಪು ಕ್ಷೇತ್ರದ ಎಲ್ಲೂರು ಗ್ರಾಮದಲ್ಲಿ ೨೬-೨-೧೯೮೬ರಂದು ರಾತ್ರಿ ಸುಮಾರು ೧೨ ಗಂಟೆ ಸಮಯದಲ್ಲಿ ಶೇಖರ ಶೆಟ್ಟಿ ಎಂಬುವರು ಅವರ ಇಬ್ಬರ ಅನುಯಾಯಿಗಳೊಂದಿಗೆ ಕಾರ್ಮಿನ್ ಗೋಡ್ರಿಗ್ಸ್ ಎಂಬುವವರ ಮನೆ ಮೇಲೆ ಆಕ್ರಮಣ ಮಾಡಿ ಅವರ ಮಗಳನ್ನು ರೇಪ್ ಮಾಡುವ ಹಾಗೂ ಕೊಲೆ ಮಾಡುವ ಉದ್ದೇಶದಿಂದ ಪಿಕಾಸಿಗಳಂತಹ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಎಲೆಕ್ಟ್ರಿಕಲ್ ಮೀಟರ್ ಹಾಗೂ ಸ್ವಿಚ್‌ಗಳನ್ನು ಒಡೆದು ಹಾಕಿದ್ದಾರೆ. ಹಿಂದಿನ ಬಾಗಿಲನ್ನು ಒಡೆದು ಅಡಿಗೆ ಮನೆಗೆ ಒಳ ನುಗ್ಗಿದ್ದು, ಬಾಗಿಲು ಒಳಗಡೆಯಿಂದ ಹಾಕಿದ್ದರಿಂದಾಗಿ ಒಳಗೆ ಹೋಗಲಾರದೆ ಮುಂದುಗಡೆ ಬಾಗಿಲನ್ನು ಒಡೆಯಲು ಪ್ರಯತ್ನಿಸಿದ್ದು ಅದರಲ್ಲಿಯೂ ವಿಫಲವಾಗಿ ಸಿಮೆಂಟ್ ಕಿಟಿಕಿಯನ್ನು ಒಡೆದಿದ್ದರಿಂದ ಅಲ್ಲಿಂದಲೂ ಒಳ ಹೋಗಲಾಗದ್ದರಿಂದ ಮನೆಗೆ ಸಾಕಷ್ಟು ನಷ್ಟ ಉಂಟು ಮಾಡಿದ್ದಾರೆ. ಹಾಗೂ ರೋಡ್ರಿಗ್ಸ್ ಅವರಿಗೆ ಕಲ್ಲೇಟು ಬಿದ್ದಿದೆ. ಶ್ರೀ ರೋಡ್ರಿಗ್ಸ್ ದೀಪ ಹೆಚ್ಚಿದಾಗ ದುಷ್ಕರ್ಮಿಗಳು ಯಾರೆಂದು ಗುರುತಿಸಿಗಲಾಟೆ ಮಾಡಿದ್ದರಿಂದ ಹಾಗೂ ನಾಯಿಗಳು ಕೂಗಿಕೊಂಡಿದ್ದರಿಂದ ದುಷ್ಕರ್ಮಿಗಳು ಓಡಿ ಹೋಗಿದ್ದಾರೆ ಮಾರನೆಯ ದಿನ ಎಂದರೆ ೨೬-೨-೧೯೮೬ರಂದು ಬೆಳಿಗ್ಗೆ ಪೊಲೀಸರಿಗೆ ದೂರು ಕೊಟ್ಟಾಗ್ಯೂ ನಿನ್ನೆ ತನಕ ನಾನು ಹೋಗಿ ನೋಡುವವರೆಗೂ ಪೊಲೀಸಿನವರು ಬಂದಿರಲಿಲ್ಲ. ನಾನು ಹೋದ ಒಂದೂವರೆ ಗಂಟೆಗಳ ನಂತರ ಸಬ್ ಇನ್ಸ್‌ಪೆಕ್ಟರ್ ಕಾನ್ಸ್‌ಟೇಬಲ್‌ಗಳನ್ನು ಕಳುಹಿಸಿ ಮಹಜರ್ ಮಾಡಿಸಿದ್ದಾರೆ. ಅಲ್ಲದೆ ದುಷ್ಕರ್ಮಿಗಳನ್ನು ಈವರೆಗೂ ಬಂಧಿಸದೇ ಯಾವುದೇ ಕ್ರಮ ಕೈಗೊಂಡಿಲ್ಲ. ಸದರಿ ಶೇಖರ್ ಶೆಟ್ಟಿ ಸಾಕ್ಷಿ ಹೇಳಿರುವವರ ಮೇಲೆ ಕೊಲೆ ಬೆದರಿಕೆ ಒಡ್ಡುತ್ತಿದ್ದಾನೆ. ಪೊಲೀಸಿನವರು ನಿಷ್ಕ್ರಿಯರಾಗಿದ್ದಾರೆ. ಆದ್ದರಿಂದ ಸರಕಾರದವರು ಈ ಕೂಡಲೇ ಸದರಿ ಶಿರ್ವಾ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್‌ರವರಿಗೆ ಆದೇಶ ನೀಡಿ ದುಷ್ಕರ್ಮಿಗಳನ್ನು ಬಂಧಿಸುವುದಲ್ಲದೆ, ದುಷ್ಕರ್ಮಿಗಳ ಮೇಲೆ ಯಾವ ಕ್ರಮವನ್ನೂ ಕೈಗೊಳ್ಳದೆ ಸಬ್ ಇನ್ಸ್‌ಪೆಕ್ಟರ್‌ರ ಮೇಲೆಯೂ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಆದಂತಹ ಡಕಾಯಿತಿ ಪ್ರಕರಣಗಳಿಗೆ ಅವರಿಗೂ ಕೂಡ ಪರಿಚಯವಿದೆ ೨೦ ಡಕಾಯಿತರನ್ನು ಹಿಡಿದು ಕೋರ್ಟಿನ ಮುಂದೆ ಹಾಜರು ಪಡಿಸಿದ್ದಕ್ಕೆ ಅವರು ಗಲ್ಲು ಶಿಕ್ಷೆಯನ್ನು ಕೊಟ್ಟಿದ್ದಾರೆ. ಅವರ ಜೊತೆಯಲ್ಲಿದ್ದವಂತಹವರಿಗೂ ಕೂಡ ಲೈಫ್ ಇಂಪ್ರಿಸೋನ್‌ಮೆಂಟ್ ಕೊಟ್ಟಿದ್ದಾರೆ. ಇಂತಹ ಕಠಿಣವಾದ ಶಿಕ್ಷೆಯನ್ನು ಅವರಿಗೆ ಕೊಡಿಸುವುದಕ್ಕೆ ಪೊಲೀಸರು ಎಷ್ಟು ದಕ್ಷತೆಯಿಂದ ಕೆಲಸ ಮಾಡಿದ್ದಾರೆ, ಜನಗಳ ಜೊತೆಯಲ್ಲಿ ಎಷ್ಟರಮಟ್ಟಿಗೆ ಹೊಂದಿಕೊಂಡು ಕೆಲಸ ಮಾಡಿದ್ದಾರೆಂಬುದು ಅವರಿಗೇ ಗೊತ್ತಿದೆ. ಅವರು ಚೆನ್ನಾಗಿ ಕೆಲಸ ಮಾಡಿದ್ದಾರೆ. ಮಾನ್ಯ ಉಮರಬ್ಬನವರಿಗೆ ಗೊತ್ತು, ಹಿಂದೆ ಅಲ್ಲಿರುವುದಕ್ಕೆ ಕಷ್ಟವಾಗುತ್ತಿತ್ತು, ನಿಮ್ಮ ಸಹಕಾರವನ್ನೂ ತೆಗೆದುಕೊಂಡು ಇಂತಹವರನ್ನು ಕಂಡುಹಿಡಿಯಲು ಪ್ರಯತ್ನ ಮಾಡೋಣ.